ದಿನಾಂಕಃ 17.03.2026

ಅಸಲುದಾವೆ: 29/2024

ಪಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನವರೆಂಬರ್ 2022 ರವರೆಗು ಪ್ರತಿವಾದಿಯರು ಬಡ್ಡಿ ಪಾವತಿಸುತ್ತಾ ಬಂದಿದ್ದು ನಂತರ ಬಡ್ಡಿ ಕೊಡದ ಕಾರಣ ನೀವು ವಕೀಲರ ಮೂಲಕ ಕಾನೂನು ತಿಳುವಳಿಕೆ ನೋಟೀಸ್ ನೀಡಿ ಕ್ರಯ ಪತ್ರ ಮಾಡಿಕೊಡುವಂತೆ ಕೇಳಿದ್ದೀರಿ ಎಂದರೆ ಸಾಕ್ಷಿ ನಾನು ಬಡ್ಡಿಗೆ ದುಡ್ಡು ನೀಡಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ನೋಟೀಸ್ ಪ್ರತಿವಾದಿಯರಿಗೆ ಜಾರಿಯಾದ ಬಳಿಕ ನಿಮ್ಮ ಬಳಿ ಬಂದು ಏಕೆ ನೋಟೀಸ್ ಕೊಟ್ಟಿದ್ದೀರಿ ಎಂದು ಕೇಳಿಕೊಂಡಾಗ ಕೇಸ್ ಮುಂದುವರಿಸುವುದಿಲ್ಲ, ನಮ್ಮ ಹಣವನ್ನು ಕೊಟ್ಟುಬಿಡಿ ಎಂದು ಕೇಳಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಂತರ ಈ ಹಿಂದೆ ಹೇಳಿದ ಚೆಕ್ ಗಳ ಪೈಕಿ 1 ನೇ ಪ್ರತಿವಾದಿ ಖಾತೆಗೆ ಸಂಬಂಧಿಸಿದ ಎಂ.ಡಿ.ಸಿ.ಸಿ ಬ್ಯಾಂಕ್ ಮದ್ದೂರು ಶಾಖೆ, ಚೆಕ್ ನಂ.703621 ನ್ನು ರೂ.5 ಲಕ್ಷಗಳಿಗೆ ಬೌನ್ಸ್ ಮಾಡಿ ದಿ.23.05.2023 ರಂದು ನಿಮ್ಮ ಯಜಮಾನರು ನೋಟೀಸ್ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಂತರ ಸದರಿ ನೋಟೀಸ್ 1 ನೇ ಪ್ರತಿವಾದಿ ತಲುಪಿದ ನಂತರ 1 ಮತ್ತು 2 ನೇ ಪ್ರತಿವಾದಿಗಳು ಬಂದು ಯಾವ ಕಾರಣಕ್ಕೆ ಈ ರೀತಿ ನೋಟೀಸ್ ಕೊಟ್ಟಿದ್ದೀರಿ ಎಂದು ನಿಮ್ಮ ಯಜಮಾನರ ಬಳಿ ಬಂದು ಕೇಳಿದಾಗ ರೂ.9 ಲಕ್ಷ ಹಣ ಮತ್ತು ಬಡ್ಡಿ ಮರುಪಾವತಿಸದ ಕಾರಣ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ನಿಮ್ಮ ಯಜಮಾನರು ರೂ.9 ಲಕ್ಷ ಹಣ ಮತ್ತು ಬಡ್ಡಿ ಮರುಪಾವತಿಸಿದರೆ ಭದ್ರತೆಯಾಗಿ ಕೊಟ್ಟಿರುವ ಚೆಕ್ ಗಳು, ಕ್ರಯದ ಕರಾರು ಪತ್ರ ರದ್ದತಿ ಮಾಡಿಕೊಡುವುದಾಗಿ ಹೇಳಿದ್ದಾರೆ ಎಂದರೆ ಸಾಕ್ಷಿ ನನಗೆ ಯಾವುದೇ ಚೆಕ್ ಗಳನ್ನು ಕೊಟ್ಟಿಲ್ಲ, ಆ ಬಗ್ಗೆ ನನಗೆ ಮಾಹಿತಿಯೂ ಇಲ್ಲ ಎಂದು ಉತ್ತರಿಸುತ್ತಾರೆ. ನಂತರ ನಿಮ್ಮ ಯಜಮಾನರು ಅಪರ ಸಿವಿಲ್ ನ್ಯಾಯಾಲಯದಲ್ಲಿ 1 ನೇ ಪ್ರತಿವಾದಿಯ ವಿರುದ್ದ ಸಿ.ಸಿ 1552/2023 ರಂತೆ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸಾಮಾನ್ಯವಾಗಿ ನೀವು ಮಾಡುವ ವ್ಯವಹಾರ ಮತ್ತು ನಿಮ್ಮ ಯಜಮಾನರು ಮಾಡುವ

ವ್ಯವಹಾರಗಳ ಬಗ್ಗೆ ಇಬ್ಬರಿಗೂ ಗೊತ್ತಾಗುತ್ತದೆ ಎಂದರೆ ಸಾಕ್ಷಿ ಹೌದು, ಆದರೆ ನಾನು ಈ ಜಮೀನಿನ ವ್ಯವಹಾರವನ್ನು ನನ್ನ ತಂದೆಯ ಜೊತೆ ಸೇರಿ ಮಾಡಿದ್ದೇನೆ ಎಂದು ಉತ್ತರಿಸುತ್ತಾರೆ. ಹಾಗಾಗಿ 1 ನೇ ಪ್ರತಿವಾದಿಯ ವಿರುದ್ಧ ನಿಮ್ಮ ಯಜಮಾನರು ದಾಖಲಿಸಿರುವ ಪ್ರಕರಣದ ಬಗ್ಗೆ ನಿಮಗೆ ಗೊತ್ತು ಆದಾರೂ ಸಹ ಗೊತ್ತಿಲ್ಲವೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಆ ಕೇಸ್ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಯಜಮಾನರು ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ರೂ.9 ಲಕ್ಷಗಳ ಭದ್ರತೆಗಾಗಿ ಮಾಡಿಕೊಟ್ಟ ಕರಾರು ಪತ್ರವನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ದಾವ ಸಲ್ಲಿಸಿ ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

2. ಕರಾರು ಮಾಡಿಕೊಂಡ ಸಮಯದಲ್ಲಿ ದಾವ ಸ್ವತ್ತಿನ ಮೌಲ್ಯ ಎಷ್ಟು ಎಂಬ ಬಗ್ಗೆ ವಿಚಾರ ಮಾಡಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನನ್ನ ತಂದೆಯವರಿಗೆ ಎಲ್ಲಾ ಗೊತ್ತು ಎಂದು ಉತ್ತರಿಸುತ್ತಾರೆ. ಕರಾರು ಮಾಡುವ ಸಮಯದಲ್ಲಿ ನಕ್ಷೆಯ ಅವಶ್ಯಕತೆ ಇದೆಯಾ ಎಂಬ ಬಗ್ಗೆ ಏನಾದರು ವಿಚಾರ ಮಾಡಿದ್ದೀರಾ ಆ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿರಬಹುದು ಎಂದು ಉತ್ತರಿಸುತ್ತಾರೆ. ದಿ.10.01.2022 ರಂದು ಕೊಟ್ಟ ನೋಟೀಸ್ ಜಾರಿಯಾಗಿಲ್ಲ ಎಂದು ದಿ.18.11.2022 ರ ನೋಟೀಸ್ ನಲ್ಲಿ ನಮೂದು ಮಾಡಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ದಿ.10.01.2022 ರಲ್ಲಿ ನೋಟೀಸ್ ಕೊಟ್ಟ ಕಾಲಕ್ಕೆ ಕ್ರಯದ ಕಾರಾರು ಪತ್ರದ ಪ್ರಕಾರಣ ಬಾಕಿ ಮೊತ್ತವನ್ನು ಅವರ ಹೆಸರಿಗೆ ಠೇವಣಿ ಇಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ದಿ.10.01.2022 ರಂದು ನೀವು ನೋಟೀಸ್ ಕೊಟ್ಟ ಕಾಲಕ್ಕೆ ಬಾಕಿ ರೂ.1 ಲಕ್ಷ ನಮ್ಮ ಬಳಿ ತಯಾರಿದೆ ಅದನ್ನು ಪಡೆದುಕೊಂಡು ಕ್ರಯ ಪತ್ರ ನೋಂದಣಿ ಮಾಡಿಸಿಕೊಡಿ ಎಂದು ಹೇಳಿದ್ದೀರಿ, ನೀವು ಹಾಜರು ಪಡಿಸಿರುವ ನಿಪಿ4 ರಲ್ಲಿ ದಿ.10.01.2022 ರಲ್ಲಿ ನಿಮ್ಮ ಖಾತೆಯಲ್ಲಿ ರೂ.1 ಲಕ್ಷ ಇರುವುದಿಲ್ಲ ಕೇವಲ ರೂ.765/- ಮಾತ್ರ ಇದೆ ಎಂದರೆ ಸಾಕ್ಷಿ ಹೌದು ಆದರೆ ಬೇರೆ ಅಕೌಂಟಿನಲ್ಲಿ ಹಣ ಇದೆ ಎಂದು ಉತ್ತರಿಸುತ್ತಾರೆ. ಹಾಗಾಗಿ ನಿಮಗೆ ರೂ.1 ಲಕ್ಷಗಳನ್ನು ಕೊಡುವ ಆದಾಯದ ಮೂಲಗಳು ಇರಲಿಲ್ಲ ಎಂದರೆ ಸಾಕ್ಷಿ ಸಾಮರ್ಥ್ಯ ಇದೆ ಎಂದು ಉತ್ತರಿಸುತ್ತಾರೆ. ದಿ.10.01.2022 ರ ನೋಟೀಸ್ ಪ್ರತಿವಾದಿಗಳಿಗೆ ಜಾರಿಯಾಗಿರುವುದಿಲ್ಲವೆಂದು ದಿ.18.11.2022 ರಂದು ನೋಟೀಸ್ ನೀಡಿದ ಕಾಲಕ್ಕೆ ಕರಾರು ಪತ್ರದ ಕಾಲಾವಧಿ ಮುಗಿದಿರುತ್ತದೆ ಎಂದರೆ ಸಾಕ್ಷಿ ಅದಕ್ಕೆ

ನೋಟೀಸ್ ಕೊಟ್ಟಿರುವುದು ಎಂದು ಉತ್ತರಿಸುತ್ತಾರೆ. ನೀವು ದಿ.18.11.2022 ರಂದು ನೋಟೀಸ್ ನೀಡಿದ ಕಾಲಕ್ಕೆ ಕರಾರಿನ ಪ್ರಕಾರ ನಿಗಧಿಪಡಿಸಿದ ಕಾಲಾವಧಿ ಮುಗಿದಿರುವುದರಿಂದ ಈ ದಾವೆ ಊರ್ಜಿತವಲ್ಲ ಎಂದರೆ ಸಾಕ್ಷಿ ಮೊದಲ ನೋಟೀಸ್ ಅನ್ನು ಕಾಲಾವಧಿಯ ಒಳಗೆ ಕೊಟ್ಟಿದ್ದೇವೆ ಎಂದು ಉತ್ತರಿಸುತ್ತಾರೆ. ಮೊದಲ ನೋಟೀಸಿ ಕೊಟ್ಟ ನಂತರ ದಾವೆ ಹೂಡಲು ಏನಾದರು ತೊಂದರೆ ಇತ್ತಾ ಎಂದರೆ ಸಾಕ್ಷಿ ಅವರು ಕಾಲಾವಕಾಶ ಕೇಳಿದ ಕಾರಣ ಸಮಯ ಕೊಟ್ಟು ಆ ನಂತರ ದಾವೆ ಹೂಡಿದ್ದೇವೆ ಎಂದು ಉತ್ತರಿಸುತ್ತಾರೆ. ಅವರು ಬಂದು ಕಾಲಾವಕಾಶ ಕೇಳಿದ ಬಗ್ಗೆ ದಾಖಲೆಗಳು ಇವೆಯಾ ಎಂರದೆ ಸಾಕ್ಷಿ ಇಲ್ಲ, ಮನೆಯಲ್ಲಿಯೇ ಕುಳಿತು ಮಾತನಾಡಿದ್ದು ಎಂದು ಉತ್ತರಿಸುತ್ತಾರೆ. ಅವರು ಬಂದು ಕಾಲಾವಕಾಶ ಕೇಳಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ16 ರಂತೆ ನೀವು ಹಾಜರು ಪಡಿಸಿರುವ ಪ್ರತ್ಯುತ್ತರ ವಿಚಾರಗಳು ಪ್ರತಿವಾದಿಗಳಿಗೆ ತಿಳಿದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಮಗೆ ಆರ್ಥಿಕವಾಗಿ ಯಾವುದೇ ಆದಾಯದ ಮೂಲಗಳು ಇಲ್ಲ ಎಂದರೆ ಸಾಕ್ಷಿ ನನಗೆ ಇಲ್ಲ, ನನ್ನ ಯಜಮಾನರಿಗೆ ಇರುತ್ತದೆ ಎಂದು ಉತ್ತರಿಸುತ್ತಾರೆ. ನಾನು ಗೃಹಿಣಿ ಎಂದರೆ ಸರಿ. ಹಣದ ಅವಶ್ಯಕತೆ ಇದ್ದಾಗ ನೀವು ನಿಮ್ಮ ಗಂಡನಿಂದ ಹಣವನ್ನು ಕೇಳಿ ಪಡೆಯುತ್ತೀರಿ ಎಂದರೆ ಸಾಕ್ಷಿ ಪಡೆದುಕೊಳ್ಳುವುದಿಲ್ಲ, ಅವರೇ ತಿಂಗಳಿಗೆ ನನಗೆ ಇಂತಿಷ್ಟು ಹಣ ಕೊಡುತ್ತಾರೆ ಎಂದು ಉತ್ತರಿಸುತ್ತಾರೆ. ನಿಮ್ಮ ಬಳಿ ಹಣವಿಲ್ಲದ ಕಾರಣ ಚಿನ್ನಾಭರಣಗಳನ್ನು ಅಡವಿಟ್ಟು ಹಣ ತೆಗೆದುಕೊಂಡಿದ್ದೀರಿ ಎಂದರೆ ಸಾಕ್ಷಿ ಹಣವಿಲ್ಲವೆಂದು ಅಲ್ಲ, ಜಮೀನು ತೆಗೆದುಕೊಳ್ಳಬೇಕು ಎಂಬ ಉದ್ದೇಶದಿಂದ ಚಿನ್ನಾಭರಣಗಳನ್ನು ಅಡವಿಟ್ಟು ಹಣ ತೆಗೆದುಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. ಚಿನ್ನಾಭರಣಗಳನ್ನು ಅಡವಿಟ್ಟು ಯಾವ ದಿನಾಂಕದಂದು ಹಣ ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿ ದಿನಾಂಕ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಚಿನ್ನಾಭರಣಗಳನ್ನು ಅಡವಿಟ್ಟು ಹಣ ಪಡೆದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನಿಮಗೆ ತೊಂದರೆ ಏನೂ ಇಲ್ಲ ಎಂದರೆ ಸಾಕ್ಷಿ ಹಾಜರು ಪಾಡಿಸುತ್ತೇನೆ ಎಂದು ಉತ್ತರಿಸುತ್ತಾರೆ. ನೀವು ರೂ.9 ಲಕ್ಷಗಳನ್ನು ಮಾತ್ರ ಪ್ರತಿವಾದಿಯರಿಗೆ ಸಾಲವಾಗಿ ಕೊಟ್ಟಿದ್ದೀರಿ, ಜಮೀನು ಖರೀದಿಸಲು ಮುಂಗಡವಾಗಿ ಅಲ್ಲ ಎಂದರೆ ಸಾಕ್ಷಿ ಜಮೀನು ಖರೀದಿಸುವ ಸಲುವಾಗಿಯೇ ರೂ.9 ಲಕ್ಷ ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ನಿಮ್ಮ ಪ್ರಮಾಣ ಪತ್ರದಲ್ಲಿ ಹೇಳಿರುವ ರೀತಿ ರೂ.3 ಲಕ್ಷಗಳನ್ನು ಚೆಕ್ ಮೂಲಕ ಮತ್ತು

ರೂ.10 ಲಕ್ಷಗಳನ್ನು ನಗದಾಗಿ ಕೊಟ್ಟಿರುವುದಾಗಿ ಸುಳ್ಳು ಹೇಳಿದ್ದೀರಿ ಎಂದರೆ ಸಾಕ್ಷಿ ಕೊಟ್ಟಿದ್ದೇವೆ ಎಂದು ಉತ್ತರಿಸುತ್ತಾರೆ. ನೀವು ಕೊಟ್ಟಿರುವ ರೂ.9 ಲಕ್ಷಗಳ ಸಾಲದ ಹಣದ ಭದ್ರತೆಗೋಸ್ಕರ ನಿಮ್ಮ ಒತ್ತಾಯದ ಮೇರೆಗೆ ಕ್ರಯದ ಕರಾರು ಪತ್ರದ ಒಕ್ಕಣೆಯನ್ನು ಬರೆಸಿಕೊಂಡಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಹಾಗಾಗಿ ಪ್ರತಿವಾದಿಯರು ಒಟ್ಟು ಕುಟುಂಬದ ಜಮೀನನ್ನು ಮಾರಾಟ ಮಾಡುವಂತಹ ಯಾವುದೇ ದರದು ಇಲ್ಲ ಎಂದರೆ ಸಾಕ್ಷಿ ಎಲ್ಲರೂ ಬಂದು ಮಾತನಾಡಿಯೇ ಮಾರಾಟ ಮಾಡಲು ಒಪ್ಪಿದ್ದು ಎಂದು ಉತ್ತರಿಸುತ್ತಾರೆ. ದಾವ ಸ್ವತ್ತು ಒಟ್ಟು ಕುಟುಂಬದ ಸ್ವತ್ತಾಗಿರುವ ಕಾರಣ ಕುಟುಂಬದ ಉಳಿದ ಸದಸ್ಯರಿಗೆ ಹಕ್ಕು ಇರುವುದರಿಂದ ಪ್ರತಿವಾದಿಯರು ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಅದೇ ರೀತಿ ನಿಮ್ಮ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳು, ಮಧುಸೂದನ್, ನಾರಾಯಣಸ್ವಾಮಿ, ಪ್ರಧೀಪ, ರವಿ, ಮರಿಯಪ್ಪ ಎಲ್ಲರೂ ಬಂದು ಕ್ರಯ ಪತ್ರ ಬರೆದುಕೊಡಲು 6 ತಿಂಗಳ ಕಾಲಾವಕಾಶ ಕೇಳಿದ್ದಾರೆ ಎಂದು ಹೇಳುವುದು ಸುಳ್ಳು ಎಂದರೆ ಸಾಕ್ಷಿ ಅವರು ಒಪ್ಪಿಕೊಂಡಿದ್ದರು ಎಂದು ಉತ್ತರಿಸುತ್ತಾರೆ. 6 ತಿಂಗಳ ಕಾಲಾವಕಾಶ ಕೇಳಿದ್ದರು ಎಂದು ಹೇಳಿದ್ದೀರಿ, ಆ ಸಮಯದಲ್ಲಿ ಮುಂದುವರಿದ ಕರಾರು ಬರೆಸಿಕೊಳ್ಳಲು ತೊಂದರೆ ಏನಾದರು ಇತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಅದೇ ರೀತಿ ಪ್ರತಿವಾದಿಗಳು ಮಾರ್ಚ್ 2022 2 ನೇ ವಾರದಲ್ಲಿ ಮತ್ತು ಮೇ 2 ನೇ ವಾರದಲ್ಲಿ ಹಾಗೂ ಜುಲೈ ಕೊನೆಯ ವಾರದಲ್ಲಿ ನೀವು ಪ್ರತಿವಾದಿಗಳನ್ನು ಬೇಟಿ ಮಾಡಿ 11 ಇ ನಕ್ಷೆ ಮಾಡಿಸಿಕೊಡುವಂತೆ ಕೇಳಿಕೊಂಡಿದ್ದೀರಿ ಎಂದು ಹೇಳುವುದು ಸುಳ್ಳು ಎಂದರೆ ಸಾಕ್ಷಿ ಮಾಡಿಕೊಡುವುದಾಗಿ ಒಪ್ಪಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ಏನಾದರು ದಾಖಲೆಗಳನ್ನು ಬರೆಸಿಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಅದೇ ರೀತಿ ಆಗಸ್ಟ್ 2022, ಸೆಪ್ಟಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿಯೂ ಪುನಃ ಬೇಟಿ ಮಾಡಿ 11–ಇ ನಕ್ಷೆ ಮಾಡಿಸಿ ಕ್ರಯ ಪತ್ರ ಮಾಡಿಕೊಡಿ ಎಂದು ಕೋರಿಕೊಂಡಿರುವುದಾಗಿ ಹೇಳುವುದು ಸುಳ್ಳು ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನೀವು ಹೇಳುವ ಕಾಲಕ್ಕೆ ನಕ್ಷೆಯ ಅವಶ್ಯಕತೆಯೇ ಇರಲಿಲ್ಲ, ನೀವು ಆ ರೀತಿ ಸೃಷ್ಟಿ ಮಾಡಿಕೊಂಡು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನೋಟೀಸ್ ಕೊಟ್ಟ ಬಳಿಕ ಅವರೇ ಬಂದು ಕ್ರಯ ಪತ್ರ ಮಾಡಿಕೊಡುತ್ತೇವೆ ಎಂದು ಹೇಳಿದರು ಎಂದು ನಿಮ್ಮ ಪ್ರಮಾಣ ಪತ್ರದಲ್ಲಿ ಹೇಳಿರುವ ಸುಳ್ಳು ಎಂದರೆ ಸಾಕ್ಷಿ ಇಲ್ಲ, ಬಂದು ಹೇಳಿದರು ಎಂದು ಉತ್ತರಿಸುತ್ತಾರೆ. ಆ ನಂತರ

ಪುನಃ 6 ತಿಂಗಳ ಕಾಲವಕಾಶ ಕೊಡುವುದಿಲ್ಲವೆಂದು ದೂರವಾಣಿಯ ಮೂಲಕ ತಿಳಿಸಿರುತ್ತೇವೆ ಎಂದು ಹೇಳುವುದೂ ಸುಳ್ಳು ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನೀವು ದಾವ ಜಮೀನನ್ನು ನೋಡಿಯೇ ಇಲ್ಲ, ಭದ್ರತೆಗಾಗಿ ಆ ಸ್ವತ್ತನ್ನು ಕರಾರು ಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿ ಇಲ್ಲ ನೋಡಿದ್ದೇವೆ ಎಂದು ಉತ್ತರಿಸುತ್ತಾರೆ. ನೀವು ಜಮೀನು ಖರೀದಿಸುವ ಉದ್ದೇಶದಿಂದ ಕರಾರು ಮಾಡಿಕೊಂಡಿದ್ದಲ್ಲಿ ನೋಟೀಸ್ ಕೊಟ್ಟ ನಂತರವೇ ದಾವೆ ಹೂಡುತ್ತಿದ್ದಿರಿ, ಒಂದು ವರ್ಷದ ನಂತರ ದಾವೆ ಹೂಡುತ್ತಿರಲಿಲ್ಲ ಎಂದರೆ ಸಾಕ್ಷಿ ಅವರು ಬಂದು ಕಾಲವಕಾಶ ಕೇಳಿಕೊಂಡಿದ್ದರಿಂದ ಎಂದು ಉತ್ತರಿಸುತ್ತಾರೆ. ಈ ವಿಚಾರವನ್ನು ನಮ್ಮ ದಾವೆಯಲ್ಲಿ ಹೇಳಿರುವುದಿಲ್ಲ. ಹಾಗಾಗಿ ಹಣದ ಭದ್ರತೆಗಾಗಿ ಮಾಡಿಸಿಕೊಂಡ ಕರಾರಿನ ಆದಾರದ ಮೇಲೆ ಸುಳ್ಳು ದಾವೆ ಹೂಡಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.